# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 248 |
| ಮಾನ್ಯ ಸದಸ್ಯರ ಹೆಸರು | ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 15/02/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ; | ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ಮಂಡಳಿ ವತಿಯಿಂದ ನೀಡಿರುವ ಮತ್ತು ಪ್ರಸ್ತುತ ನೀಡಲಾಗುತ್ತಿರುವ ಸವಲತ್ತುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.<br>• ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಕಲಿಕೆ ಭಾಗ್ಯದಡಿ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.<br>• ಮಂಡಳಿ ವತಿಯಿಂದ ಮಂಡಳಿ ಪ್ರಾರಂಭವಾದಾಗಿನಿಂದ ಈವರೆವಿಗೂ ಒಟ್ಟು 21.77 ಲಕ್ಷ ವಿದ್ಯಾರ್ಥಿಗಳಿಗೆ ರೂ.1,490.94 ಕೋಟಿಗಳನ್ನು ಶೈಕ್ಷಣಿಕ ಸಹಾಯ ಧನವನ್ನಾಗಿ ನೀಡಲಾಗಿದೆ.<br>• 2022-23ನೇ ಸಾಲಿನಲ್ಲಿ ಎಂಟನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿದ್ದ ನೋಂದಾಯಿತ ಅರ್ಹ ಕಟ್ಟಡ ಕಾರ್ಮಿಕರ ಮಕ್ಕಳಿಗೆ 16,400 ಟ್ಯಾಬ್ ಗಳನ್ನು ವಿತರಣೆ ಮಾಡಿ ರೂ.36.73 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.<br>• 2022-23ನೇ ಸಾಲಿನಲ್ಲಿ ಪ್ರಥಮ ಪದವಿ ಪೂರ್ವ ಮತ್ತು ದ್ವಿತಿಯ ಪದವಿ ಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ನೋಂದಾಯಿತ ಅರ್ಹ ಕಟ್ಟಡ ಕಾರ್ಮಿಕರ ಮಕ್ಕಳಿಗೆ 7,000 ಲ್ಯಾಪ್ ಟಾಪ್‌ಗಳನ್ನು ವಿತರಣೆ ಮಾಡಲಾಗಿರುತ್ತದೆ.<br>• 2022-23ನೇ ಸಾಲಿನಲ್ಲಿ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ನೋಂದಾಯಿತ ಅರ್ಹ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಪುಸ್ತಕಗಳು ಹಾಗೂ ಲೇಖನ ಸಾಮಾಗ್ರಿಗಳನ್ನೊಳಗೊಂಡ 1,60,000 ಶಾಲಾ ಶಿಕ್ಷಣ ಕಿಟ್‌ಗಳನ್ನು ವಿತರಣೆ ಮಾಡಿ ರೂ.122.24 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ. |
| ಆ) | ಕಟ್ಟಡ ಕಾರ್ಮಿಕರ ಮಕ್ಕಳಿಗೆ ಲ್ಯಾಪ್ ಟಾಪ್ ನೀಡಬೇಕೆಂಬ ಸರ್ಕಾರದ ಯೋಜನೆಯಲ್ಲಿ ಎಷ್ಟು ಲ್ಯಾಪ್ ಟಾಪ್ ಗಳನ್ನು ಇಲ್ಲಿಯವರೆಗೆ ನೀಡಲಾಗಿದೆ; | ಕಾರ್ಮಿಕ ಇಲಾಖೆಯಲ್ಲಿ ಪ್ರಾದೇಶಿಕವಾರು 1400 ಲ್ಯಾಪ್‌ಟಾಪ್‌ನಂತೆ ಒಟ್ಟು 05 ಪ್ರಾದೇಶಿಕದಲ್ಲಿ 7,000 ಲ್ಯಾಪ್‌ಟಾಪ್‌ಗಳನ್ನು 2022-23ನೇ ಸಾಲಿನ ವಿದ್ಯಾರ್ಥಿಗಳಿಗೆ ವಿತರಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-01** ರಲ್ಲಿ ಒದಗಿಸಲಾಗಿದೆ. |

ಇ) ಮಾರುಕಟ್ಟೆಯಲ್ಲಿ ರೂ.38 ಸಾವಿರಕ್ಕೆ ಸಿಗುವ ಲ್ಯಾಪ್ ಟಾಪ್ ಗಳನ್ನು ರೂ.71 ಸಾವಿರಕ್ಕೆ ಖರೀದಿಸಿ ಇಲಾಖೆಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಆರೋಪಕ್ಕೆ ಹೊಣೆಗಾರರು ಯಾರು: (ಖರೀದಿಸಿದ ಲ್ಯಾಪ್ ಟಾಪ್ ಗಳ ವಿವರ ನೀಡುವುದು)

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಲ್ಯಾಪ್ ಟಾಪ್ ಅನ್ನು ನೀಡಲು ಮಂಡಳಿಯ ದಿನಾಂಕ: 16.06.2022 ರಂದು ನಡೆದ 36ನೇ ಸಭೆಯಲ್ಲಿ ನಿರ್ಧರಿಸಲಾಗಿದೆ. ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ:05.11.2022 ರಂದು ಸಭೆಯಲ್ಲಿ ನಿಗಧಿಪಡಿಸಿರುವ Specifications ಗಳನ್ವಯ ಕಿಯೋನಿಕ್ಸ್ ಸಂಸ್ಥೆಯಿಂದ ಪ್ರತಿ ಲ್ಯಾಪ್‌ಟಾಪ್ ಗಳ ಅಂದಾಜು ಬೆಲೆಯನ್ನು ಪಡೆಯಲಾಗಿರುತ್ತದೆ.

ಮಂಡಳಿಯ ದಿನಾಂಕ:12.01.2023ರಂದು ನಡೆದ 38ನೇ ಸಭೆಯ ತೀರ್ಮಾನದನ್ವಯ ಪ್ರಾದೇಶಿಕವಾರು 05 ಟೆಂಡರ್‌ಗಳನ್ನು ಲ್ಯಾಪ್ ಟಾಪ್ ಅನ್ನು ಖರೀದಿಸಲು ದಿನಾಂಕ:17.01.2023ರಂದು ಇ-ಟೆಂಡರ್ ಕರೆಯಲಾಗಿದ್ದು, ದಿನಾಂಕ:29.03.2023ರ ಆರ್ಥಿಕ ಬಿಡ್‌ನಲ್ಲಿ ಅತ್ಯಂತ ಕಡಿಮೆ ದರವನ್ನು ನಮೂದಿಸಿದ ಎಲ್-1 ಸಂಸ್ಥೆಯನ್ನು ಅಂತಿಮಗೊಳಿಸಲಾಗಿದೆ. ಈ ಮದ್ಯೆ ವಿಧಾನ ಸಭಾ ಚುನಾವಣೆ ಘೋಷಣೆಯಾದ ಹಿನ್ನಲೆಯಲ್ಲಿ ಇ-ಟೆಂಡರ್ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು. ತದನಂತರ ದಿನಾಂಕ:21.06.2023ರ ಆದೇಶದಂತೆ ಟೆಂಡರ್ ಪ್ರಕ್ರಿಯೆಯನ್ನು ಮುಂದುವರೆಸಿ, ದಿನಾಂಕ: 29.03.2023 ರಂದು ಅಂತಿಮಗೊಳಿಸಲಾಗಿದ್ದ ಎಲ್-1 ಬಿಡ್‌ದಾರರಿಗೆ ಸರಬರಾಜು ಆದೇಶವನ್ನು ದಿನಾಂಕ:17.08.2023ರಂದು ನೀಡಲಾಗಿರುತ್ತದೆ.

ತಾಂತ್ರಿಕ ಸಲಹಾ ಸಮಿತಿ ಅನುಮೋದಿಸಿರುವ Specifications ಗಳನ್ನು **<u>ಅನುಬಂಧ-2</u>**ರಲ್ಲಿ ಒದಗಿಸಲಾಗಿದೆ. ಇ-ಟೆಂಡರ್‌ನಲ್ಲಿ Specificationsಗೆ ಅನುಗುಣವಾಗಿ ಈ ಕೆಳಕಂಡ Item ಗಳಿಗೆ ಕನಿಷ್ಟ ದರಗಳನ್ನು ನಮೂದು ಮಾಡಲಾಗಿರುತ್ತದೆ.

| ಕ್ರ. ಸಂ. | ವಿವರಗಳು | ದರ (ರೂ.ಗಳಲ್ಲಿ) |
|---|---|---|
| 1 | ಲ್ಯಾಪ್‌ಟಾಪ್ | 44,661/- |
| 2 | ನಿಗಧಿಪಡಿಸಿದ ತರಗತಿಯ ಅನಿಮೇಟೆಡ್ ಪಠ್ಯಕ್ರಮಗಳು | 4,920/- |
| 3 | 02 ವರ್ಷದ ವಾರಂಟಿ | 3,867/- |
| 4 | ಎಂಡಿಎಂ ಸಾಫ್ಟ್‌ವೇರ್ | 2,500/- |
| 5 | ಪೆನ್‌ಡ್ರೈವ್ 128 ಜಿಬಿ | 1,500/- |
| 6 | 02 ವರ್ಷದ ವೈರಸ್ ನಿರೋಧಕ (Anti-virus) ಪ್ಯಾಕೇಜ್ | 1,400/- |
| 7 | ಬ್ಯಾಗ್ | 1,400/- |
| 8 | ತೆರಿಗೆಗಳು | 10,845/- |
| | **ಒಟ್ಟು** | **71,093/-** |

ಟೆಂಡರ್‌ನ ಮೂಲಕ ಆಯ್ಕೆಯಾದ ಸಂಸ್ಥೆಯು ಪ್ರತಿ ಲ್ಯಾಪ್‌ಟಾಪ್‌ಗೆ ನಿಗಧಿಪಡಿಸಿದ ರೂ.71,093/- ದರಕ್ಕಿಂತ ಕಡಿಮೆ ದರದಲ್ಲಿ ಅಂದರೆ, ಪ್ರತಿ ಲ್ಯಾಪ್‌ಟಾಪ್‌ಗೆ ರೂ.71,046/- ರಂತೆ ಸರಬರಾಜು ಮಾಡಿರುತ್ತಾರೆ.

| | | |
|---|---|---|
| ಈ) | ಬಡ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಲ್ಯಾಪ್ ಟಾಪ್ ಗಳ ಖರೀದಿಯಲ್ಲಿ ಅವ್ಯವಹಾರ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ವಯ ಮಂಡಳಿಯಲ್ಲಿ ಲ್ಯಾಪ್‌ಟಾಪ್ ಖರೀದಿಗಾಗಿ ಇ-ಟೆಂಡರ್ ಕರೆದು ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡಿ ಲ್ಯಾಪ್‌ಟಾಟ್‌ಗಳನ್ನು ಪೂರೈಕೆ ಮಾಡಿಕೊಳ್ಳಲಾಗಿದ್ದು, ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ. |

**ಕಾಇ 100 ಎಲ್‌ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-01

## ಮಂಡಳಿಯಿಂದ ಉಪವಿಭಾಗವಾರು ಹಂಚಿಕೆ ಮಾಡಲಾದ ಲ್ಯಾಪ್‌ಟಾಪ್‌ಗಳ ವಿವರ

| ಕ್ರ. ಸಂ. | ಕಛೇರಿಯ ಹೆಸರು | ಲ್ಯಾಪ್‌ಟಾಪ್‌ಗಳ ಸಂಖ್ಯೆ |
|---|---|---|
| 1 | ಕಾ.ಅ, ಬಾಗಲಕೋಟೆ | 160 |
| 2 | ಕಾ.ಅ, ಬೆಂಗಳೂರು-1 | 247 |
| 3 | ಕಾ.ಅ, ಬೆಂಗಳೂರು-2 | 203 |
| 4 | ಕಾ.ಅ, ಬೆಂಗಳೂರು-3 | 50 |
| 5 | ಕಾ.ಅ, ಬೆಂಗಳೂರು-4 | 50 |
| 6 | ಕಾ.ಅ, ಬೆಂಗಳೂರು-5 | 95 |
| 7 | ಕಾ.ಅ, ಬೆಂಗಳೂರು-6 | 50 |
| 8 | ಕಾ.ಅ, ಬೆಂಗಳೂರು-7 | 50 |
| 9 | ಬೆಂಗಳೂರು ಗ್ರಾಮಾಂತರ | 174 |
| 10 | ಕಾ.ಅ. ಬೆಳಗಾವಿ-1 | 110 |
| 11 | ಕಾ.ಅ. ಬೆಳಗಾವಿ-2 | 167 |
| 12 | ಕಾ.ಅ, ಬಳ್ಳಾರಿ | 75 |
| 13 | ಕಾ.ಅ, ವಿಜಯನಗರ | 100 |
| 14 | ಕಾ.ಅ, ಬೀದರ್ | 200 |
| 15 | ಕಾ.ಅ, ಬಿಜಾಪುರ | 152 |
| 16 | ಕಾ.ಅ, ಚಾಮರಾಜನಗರ | 200 |
| 17 | ಕಾ.ಅ, ಚಿಕ್ಕಬಳ್ಳಾಪುರ | 150 |
| 18 | ಕಾ.ಅ. ಚಿಕ್ಕಮಗಳೂರು | 280 |
| 19 | ಕಾ.ಅ, ಚಿತ್ರದುರ್ಗ | 150 |
| 20 | ಕಾ.ಅ. ದಾವಣಗೆರೆ | 175 |
| 21 | ಕಾ.ಅ, ಗದಗ | 140 |
| 22 | ಕಾ.ಅ. ಹುಬ್ಬಳ್ಳಿ-1 | 85 |
| 23 | ಕಾ.ಅ. ಹುಬ್ಬಳ್ಳಿ-2 | 140 |
| 24 | ಕಾ.ಅ, ಹಾಸನ | 250 |
| 25 | ಕಾ.ಅ, ಹಾವೇರಿ | 250 |
| 26 | ಕಾ.ಅ, ಕಲಬುರಗಿ | 300 |
| 27 | ಕಾ.ಅ, ಕಾರವಾರ | 102 |
| 28 | ಕಾ.ಅ, ಕೋಲಾರ | 200 |
| 29 | ಕಾ.ಅ, ಕೊಪ್ಪಳ | 165 |
| 30 | ಕಾ.ಅ, ಕೊಡಗು | 28 |
| 31 | ಕಾ.ಅ, ಮಂಡ್ಯ | 200 |
| 32 | ಕಾ.ಅ. ಮೈಸೂರು | 450 |
| 33 | ಕಾ.ಅ. ಮಂಗಳೂರು-1 | 154 |
| 34 | ಕಾ.ಅ. ಮಂಗಳೂರು-2 | 148 |
| 35 | ಕಾ.ಅ, ರಾಯಚೂರು | 90 |
| 36 | ಕಾ.ಅ, ರಾಮನಗರ | 246 |
| 37 | ಕಾ.ಅ, ಶಿವಮೊಗ್ಗ | 378 |
| 38 | ಕಾ.ಅ, ತುಮಕೂರು | 285 |
| 39 | ಕಾ.ಅ, ಉಡುಪಿ | 162 |
| 40 | ಕಾ.ಅ. ಯಲ್ಲಾಪುರ | 94 |
| 41 | ಕಾ.ಅ, ಯಾದಗಿರಿ | 145 |
| 42 | ಕಾ.ಅ. ಮಧುಗಿರಿ | 150 |
| | **ಒಟ್ಟು** | **7000** |

# ಅನುಬಂಧ-02

## Laptop Specifications

| Sl. No. | Description |
|---|---|
| 1 | PROCESSOR, Intel core i3 (10th Generation or higher) or AMD Ryzen 3, either of them having dual core 2 Ghz, 4 MB cache or equivalent or Higher., Chipset, Compatible chipset from intel or AMD only, Mother Board, OEM Motherboard with TPM 2.0, Display, 14.0 "HD (1366x 768) with LED Backlight Display, 16.9 aspect ratio., Memory, 8 GB DDR 4 or Higher expandable to 16 GB with 1 free slot, Secondary Storage, 1 TB HDD 5400 rpm or higher is faster, Connectivity Technology, WiFi 802.11 ac with Bluetooth 5.0 or Higher, Keyboard, Keyboard with touch pad with multi gesture support, Ports/card reader, Minimum 3 USB ports with at least two USB 3.0 VGA HDMI port, RJ 45 port, Combo audio/Microphone jack, Network interface, Integrated gigabit Ethernet (10/100/1000 MBPS), Graphics Controller, Integrated HD Graphics, Battery, Minimum 4 Hours backup during normal usage, Audio and Visual, Built in Microphone and stereo sound speakers integrated HD webcam, Laptop Casing, Strong Hinges with casing for longer durability and stability for good Quality support structure., Weight, Not more than 2.5 Kgs including battery, Security features, Power on password, Hard disk password, Supervisor password, Lock slot, Software, Apache open office preloaded/Libre open office preloaded, Certifications, For Laptop: Windows 10, FCC, Energy star, BIS for OEM:ISO 9001, ISO 14001, Windows 11 Home Editions or Higher. |
| 2 | Warranty, Two years Comprehensive Maintenance at site (2 years on OS, Battery and Adapter) |
| 3 | Antivirus, Pre-loaded with latest version of Antivirus Symantec/MacAfee/NOD32/e Trust/Kaspersky/escan/Quick Heal/K7 or equivalent with 2 years support and Software, Appache open office/Libre Open Office |
| 4 | Carry case, Good Quality backpack should be provided by the vendor |
| 5 | Pen drive, 128 GB |
| 6 | Syllabus Animated content should be pre-loaded and self – installed with updating software (Activation Keys to be provided) |
| 7 | MDM Software (Mobile Device Management) |